

بِسْمِ اللهِ الرَّحْمٰنِ الرَّحِيمِ

# ಖತ್‌ಮೆನುಬುವ್ವತ್‌ನ ಯಥಾರ್ಥ ಧ್ವಜವಾಹಕ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಆಗಿದ್ದಾರೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **29–04–2016** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:* ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಾದ ಮತ್ತು ಜಮಾಅತ್ ಸ್ಥಾಪನೆಯ ಕಾಲದಿಂದ ಇಂದಿನ ತನಕ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಿರುದ್ಧ ಮತ್ತು ಅವರನ್ನು ನಂಬುವವರ ವಿರುದ್ಧ ಅಹ್ಮದಿಯೇತರ ಮುಸ್ಲಿಮರು ದೋಷಾರೋಪಣೆ ಮಾಡುತ್ತಾ ಇದ್ದಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತನ್ನನ್ನು ನಬಿ (ಪ್ರವಾದಿ) ಎಂದು ಹೇಳುವ ಮೂಲಕ ಮತ್ತು ಅವರನ್ನು ನಾವು ನಬಿ ಎಂದು ನಂಬುವ ಮೂಲಕ ಖತ್‌ಮೇ ನುಬುವ್ವತ್ತನ್ನು ನಿರಾಕರಿಸಿದ್ದೇವೆ ಎಂದು ಅವರು ದೋಷಾರೋಪ ಮಾಡುತ್ತಾರೆ. ಆದರೆ ವಾಸ್ತವದಲ್ಲಿ ಇದೊಂದು ಸಂಪೂರ್ಣ ಸುಳ್ಳು ಆರೋಪವಾಗಿದೆ ಮತ್ತು ಅಸತ್ಯ ಹೇಳಿಕೆಯಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನಮಗೆ ನೀಡಿದ ಉಪದೇಶಗಳ ಪ್ರಕಾರ ನಾವು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ನುಬುವ್ವತ್ತಿನ (ಪ್ರವಾದಿತ್ವದ) ಖಾತಮಿಯ್ಯತ್ (ಶ್ರೇಷ್ಠತೆ) ಬಗ್ಗೆ ಎಷ್ಟು ಹೆಚ್ಚಿಗೆ ನಂಬಿಕೆ ಹೊಂದಿದ್ದೇವೆ ಮತ್ತು ಅದನ್ನು ಕೃತ್ಯಗಳ ಮೂಲಕ ಪ್ರಕಟಿಸುವವರಾಗಿದ್ದೇವೆ ಎಂದರೆ ಅದು ಇತರ ಮುಸ್ಲಿಮ್ ಪಂಗಡಗಳಿಗಿಂತ ಎಷ್ಟೋ ಹೆಚ್ಚಿನ ಮಟ್ಟದಲ್ಲಿದೆ. ಇದರ ಲಕ್ಷದಲ್ಲಿ ಒಂದು ಪಾಲಿನಷ್ಟು ಸಹ ಇತರ ಮುಸ್ಲಿಮ್ ಪಂಗಡಗಳು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಶ್ರೇಷ್ಠತೆ ಬಗ್ಗೆ ಮನವರಿಕೆ ಮಾಡಿಕೊಂಡಿಲ್ಲ. ಅಲ್ಲಾಹನ ಅನುಗ್ರಹದಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಉಪದೇಶಗಳ ಮೂಲಕ ಅಹ್ಮದಿಯರು ಈ ಅರಿವುಗಳಿಸಿದ್ದಾರೆ. ಖತ್‌ಮೆನುಬುವ್ವತ್ತನ್ನು ಆಧಾರವಾಗಿಟ್ಟುಕೊಂಡು ಅಹ್ಮದಿಯೇತರ ಮುಸ್ಲಿಮರು ಯಾವಾಗಲೂ ಅಹ್ಮದಿಯರನ್ನು ವಿರೋಧಿಸುತ್ತಾ ಇರುತ್ತಾರೆ. ಮಸ್‌ಜಿದ್‌ಗಳಲ್ಲಿ ಈ ವಿಷಯದ ಬಗ್ಗೆ ನಿರಂತರ ಪ್ರಕಟಿಸುತ್ತಾ ಇರುತ್ತಾರೆ. ಇದರ ಫಲವಾಗಿ ಅಹ್ಮದಿಯೇತರ ಮುಸ್ಲಿಮರ ಮಕ್ಕಳು ಸಹ, ಅವರಿಗೆ ಸ್ವತಃ ಕಲಿಮ ಸಹ ಚೆನ್ನಾಗಿ ನೆನಪಿಲ್ಲದಿದ್ದರೂ ಅಹ್ಮದಿ ಮಕ್ಕಳೊಂದಿಗೆ ಶಾಲೆಯಲ್ಲಿ 'ನೀವು ಮುಸ್ಲಿಮರಲ್ಲ' ಎಂದು ಹೇಳುತ್ತಾರೆ. ಕೆಲವು ಹುಡುಗರು ಮತ್ತು ಹೆಣ್ಣು ಮಕ್ಕಳು ನನಗೆ ಈ ವಿಷಯದ ಬಗ್ಗೆ ಬರೆದು ನಮ್ಮೊಂದಿಗೆ ಹೀಗೆ ವರ್ತಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ. ನಾನು ಅವರೊಂದಿಗೆ ಹೇಳುತ್ತೇನೆ: ನೀವು ಇಸ್ಲಾಮ್ ಬಗ್ಗೆ ಹೆಚ್ಚು ಜ್ಞಾನ ಗಳಿಸಿರಿ ಮತ್ತು ನಿಮ್ಮ ಸ್ನೇಹಿತರೊಂದಿಗೆ ಹೇಳಿರಿ: 'ನಾವು ಮುಸ್ಲಿಮರಾಗಿದ್ದೇವೆ ಹಾಗೂ ನಾವು ಇಸ್ಲಾಮಿನ ಉಪದೇಶಗಳ ಪ್ರಕಾರ ವರ್ತಿಸುತ್ತೇವೆ. ನಾವು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಖಾತಮುನ್ನಬಿಯ್ಯೀನ್ ಎಂದು ನಂಬುತ್ತೇವೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ನುಡಿದ ಭವಿಷ್ಯವಾಣಿ ಪ್ರಕಾರ ಆಗಮಿಸಿದ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಾವು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಸೇವಕ ಮತ್ತು ಅವರನ್ನು ಅನುಸರಿಸುವ ಪ್ರವಾದಿ (ತಾಬಿಲ್ ನಬಿ) ಎಂದು ನಂಬುತ್ತೇವೆ ಎಂದು ಹೇಳಿರಿ.' ಅಹ್ಮದಿ ಮಕ್ಕಳು ಮತ್ತು ಯುವಕರು ಇಸ್ಲಾಮ್ ಧರ್ಮ ತತ್ವಗಳ ಬಗ್ಗೆ ಪರಿಪೂರ್ಣ ಜ್ಞಾನ ಗಳಿಸುವುದು ಆವಶ್ಯಕವಾಗಿದೆ. ಈ ಕಾಲಘಟ್ಟದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಸ್ಪಷ್ಟಪಡಿಸಿ ವಿವರಿಸಿದ ಇಸ್ಲಾಮ್ ಧರ್ಮ ತತ್ವಗಳನ್ನು ಪರಿಪೂರ್ಣವಾಗಿ ಅರಿತುಕೊಳ್ಳುವುದು ಅವರಿಗೆ ಕಡ್ಡಾಯವಾಗಿದೆ. ಆ ಉಪದೇಶಗಳ ಮೇಲೆ ಅಹ್ಮದಿಯ ಜಮಾಅತ್ ಸ್ಥಾಪಿತವಾಗಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕೊನೆಯ ಶರಈ (ಶರೀಅತ್ ತರುವ) ನಬಿ ಆಗಿದ್ದಾರೆ. ಶರೀಅತ್‌ಗೆ ಸಂಬಂಧಿಸಿದ ನುಬುವ್ವತ್ ಅವರ ಮೂಲಕ ಕೊನೆಗೊಂಡಿದೆ. ಎಂದರೆ ಇನ್ನು ಯಾವುದೇ ಹೊಸ ಶರೀಅತ್ ಬರಲು ಸಾಧ್ಯವಿಲ್ಲ. ಪವಿತ್ರ ಖುರ್‌ಆನ್ ಅಂತಿಮ ಶರೀಅತ್ ಗ್ರಂಥವಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸೇವಕರಾಗಿ ಆಗಮಿಸಿದ ಗುಲಾಮ್ ನಬಿ ಆಗಿದ್ದಾರೆ. ಅವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನುಬುವ್ವತ್ತನ್ನು ಜಾರಿಯಲ್ಲಿರಿಸುವ ಪ್ರವಾದಿಯಾಗಿದ್ದಾರೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಶರೀಅತನ್ನೇ ಲೋಕದಲ್ಲಿ ಅವರು ಹಬ್ಬಿಸಬೇಕಾಗಿದೆ.

ನಾವು ಯಾವಾಗಲೂ ನೋಡುತ್ತಿರುವುದು, ಅಲ್ಲಾಹನು ನಮ್ಮೊಂದಿಗೆ ಹೇಗೆ ವರ್ತಿಸುತ್ತಾನೆಂದರೆ ಯಾವಾಗಲೆಲ್ಲಾ ಅಹ್ಮದಿಯಾ ಜಮಾಅತ್ ವಿರುದ್ಧ ವಿರೋಧ ವರ್ಧಿಸಿತೋ ಆವಾಗಲೆಲ್ಲಾ ಆ ವಿರೋಧಗಳು ಜಮಾಅತಿನ ಬೆಳವಣಿಗೆಯನ್ನು ವರ್ಧಿಸುವ ಉತ್ತೇಜಕವಾಗಿ ಪರಿಣಮಿಸಿದುವು. ಆದುದರಿಂದ ನಮಗೆ ವಿರೋಧಗಳ ಬಗ್ಗೆ ಯಾವ ಚಿಂತೆಯೂ ಹಿಂದೆ ಇರಲಿಲ್ಲ, ಈಗಲೂ ಇಲ್ಲ ಮತ್ತು ಮುಂದೆ ಸಹ ಇರಲಾರದು. ಇಂದಿನ ಈ ವಿರೋಧಗಳ ಕಾರಣದಿಂದ ಪ್ರಚಾರ ಮಾಧ್ಯಮಗಳ ಮೂಲಕ ಜಮಾಅತಿನ ಬಗ್ಗೆ ಬಹಳ ವಿಶಾಲವಾಗಿ ಪ್ರಚಾರ ಲಭಿಸಿದೆ. ಹಿಂದೆ ಇಷ್ಟು ಸ್ವಲ್ಪ ಕಾಲಾವಧಿಯಲ್ಲಿ ಇಂತಹ ಪ್ರಚಾರ ನಡೆಸುವುದು ಪ್ರಾಯಶಃ ಸಾಧ್ಯವಿರಲಿಲ್ಲ. ಕೆಲವು ಅಹ್ಮದಿ ಯುವಕರು ಧರ್ಮದ ಬಗ್ಗೆ ಹೆಚ್ಚು ಆಸಕ್ತಿ ಹೊಂದಿರಲಿಲ್ಲ. ಅಂತಹ ಜನರಿಗೆ ಮತ್ತು ಅಹ್ಮದಿಯಾ ಜಮಾಅತ್‌ನೊಂದಿಗೆ ದೂರದ ಸಂಬಂಧವಿರಿಸಿದವರಿಗೆ ಪ್ರಚಾರ ಮಾಧ್ಯಮಗಳ ಮೂಲಕ ಚೆನ್ನಾಗಿ ತಿಳಿಯುವಂತಾಯಿತು. ಅಂದರೆ, ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಬಿ ಎಂದು ನಂಬುತ್ತೇವೆ. ಆದರೆ ಅವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಗುಲಾಮರಾದ ನಬಿ ಎಂದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಗುಲಾಮರಾಗಿ ಹೇಗೆ ವರ್ತಿಸಿದರು, ಹಝ್ರತ್

ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ **ಖಾತಮುನ್ನಬಿಯ್ಯೀನ್** ಎಂಬ ಸ್ಥಾನವನ್ನು ಹೇಗೆ ತೋರಿಸಿಕೊಟ್ಟರು, ನಮಗೆ ಯಾವ ರೀತಿ ಮಾರ್ಗದರ್ಶನ ನೀಡಿದರು ಎಂಬುದರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕೆಲವು ಉಲ್ಲೇಖಗಳನ್ನು ನಿಮ್ಮ ಮುಂದೆ ಇರಿಸುತ್ತೇನೆ. ಅವರು ಹೇಳುತ್ತಾರೆ:

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಖಾತಮುನ್ನಬಿಯ್ಯೀನ್ ಎಂದು ದೃಢವಾಗಿ ನಂಬುವ ತನಕ ಯಾವುದೇ ವ್ಯಕ್ತಿ ಮುಸ್ಲಿಮನಾಗಲಾರನು ಮತ್ತು ಅವರನ್ನು ಅನುಸರಿಸುವವನಾಗಲಾರ ಎಂಬುದನ್ನು ನೀವು ಚೆನ್ನಾಗಿ ತಿಳಿದುಕೊಳ್ಳಿರಿ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮತ್ತೂ ಹೇಳುತ್ತಾರೆ: ಯಾವ ಉದ್ದೇಶಕ್ಕೋಸ್ಕರ ಅಲ್ಲಾಹನು ನಮ್ಮ ಹೃದಯದಲ್ಲಿ ಉತ್ಸಾಹವನ್ನು ಇಳಿಸಿರುವನೋ ಅದು ಕೇವಲ ಇದು ಮಾತ್ರವಾಗಿದೆ. ಅಂದರೆ ಶಾಶ್ವತವಾಗಿ ನೆಲೆ ನಿಲ್ಲಲು ಅಲ್ಲಾಹನು ಸ್ಥಾಪಿಸಿದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನುಬುವ್ವತನ್ನು ಮಾತ್ರ ಲೋಕದಲ್ಲಿ ಸ್ಥಾಪಿಸಿ ಉಳಿದ ಎಲ್ಲ ಸುಳ್ಳು ನುಬುವ್ವತ್‌ಗಳನ್ನು– ಜನರು ತಮ್ಮ ನವೀನಾಚರಗಳಿಂದ ಸ್ಥಾಪಿಸಿದ ಎಲ್ಲ ಸುಳ್ಳು ನುಬುವ್ವತ್‌ಗಳನ್ನು– ನುಚ್ಚುನೂರು ಗೊಳಿಸಬೇಕೆಂದಾಗಿದೆ. ನೀವು ಎಲ್ಲ ದರ್ಗಾಗಳನ್ನು ನೋಡಿರಿ. ಅಲ್ಲೇನು ನಡೆಯುತ್ತಿದೆ ಎಂದು ನೋಡಿರಿ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಖತ್ಮೆ ನುಬುವ್ವತ್ ಬಗ್ಗೆ ನಂಬಿಕೆ ಹೊಂದಿರುವವರು ನಾವೋ ಅಥವಾ ಅವರೋ? ಎಂದು ನೋಡಿರಿ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ: ಖತ್ಮೆ ನುಬುವ್ವತ್‌ನಿಂದ ಅಲ್ಲಾಹನು ಉದ್ದೇಶಿಸುವುದು, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಬಾಯಿ ಮಾತಿನಿಂದ ಖಾತಮುನ್ನಬಿಯ್ಯೀನ್ ಎಂದು ಹೇಳಿ, ಕೆಲಸ ನೀವು ಇಚ್ಛಿಸಿದ ಹಾಗೆ ಮಾಡಿ, ನೀವು ಸ್ವತಃ ನಿಮ್ಮ ಹೊಸದಾದ ಒಂದು ಶರೀಅತ್ ರಚಿಸಬಹುದು ಎಂದಾಗಿದೆಯೇ? ಇದು ದೌರ್ಜನ್ಯಕರವಾದ ಉದ್ಧಟತನವಾಗಿದೆ. ಬಗ್‌ದಾದಿ ನಮಾಝ್, ಮಅಕೂಸ್ ನಮಾಝ್ ಮೊದಲಾದವುಗಳನ್ನು ಆವಿಷ್ಕರಿಸಲಾಗಿದೆ. ಪವಿತ್ರ ಖುರ್‌ಆನ್ ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಡೆವಳಿಕೆಗಳಲ್ಲಿ ಇವುಗಳ ಬಗ್ಗೆ ಯಾವುದಾದರೂ ಸೂಚನೆ ಲಭಿಸುತ್ತಿದೆಯೇ? 'ಯಾ ಶೇಖ್ ಅಬ್ದುಲ್ ಖಾದಿರ್ ಜೀಲಾನಿ ಶೈಅನ್‌ಲಿಲ್ಲಾಹ್' ಎಂದು ಘೋಷಿಸುವ ಬಗ್ಗೆ ಯಾವುದಾದರೂ ಸಾಕ್ಷ್ಯಾಧಾರ ಪವಿತ್ರ ಖುರ್‌ಆನ್‌ನಿಂದ ಸಿಗುತ್ತಿದೆಯೇ? ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕಾಲದಲ್ಲಿ ಶೇಖ್ ಅಬ್ದುಲ್ ಖಾದಿರ್ ಜೀಲಾನಿ ರಝಿಯಲ್ಲಾಹು ಅನ್‌ಹು ಜೀವಿಸಿರಲಿಲ್ಲ. ಮತ್ತೆ ಹೀಗೆ ಹೇಳಲು ನಿಮಗೆ ಯಾರು ಕಲಿಸಿದರು? ನೀವು ನಾಚಿಕೆ ಹೊಂದಿರಿ. ಇಸ್ಲಾಮಿನ ಶರೀಅತನ್ನು ಅನುಸರಿಸುವ ರೀತಿ ಇದುವೇ? ಯೋಚಿಸಿ ನೋಡಿರಿ, ನೀವು ಈ ರೀತಿ ನಂಬಿಕೊಂಡು, ಈ ರೀತಿ ಆಚರಣೆಗಳನ್ನು ಮಾಡಿಕೊಳ್ಳುವವರು, ನನ್ನನ್ನು ಖತ್ಮೆ ನುಬುವ್ವತ್ತಿನ ಮುದ್ರೆಯನ್ನು ಮುರಿದಿರುವೆನು ಎಂದು ಆಕ್ಷೇಪಿಸಲು ನಿಮಗಿರುವ ಅರ್ಹತೆ ಏನು ಎಂದು ನೀವೇ ಯೋಚಿಸಿರಿ. ವಾಸ್ತವಿಕ ವಿಷಯವೇನೆಂದರೆ ನೀವು ನಿಮ್ಮ ಮಸ್‌ಜಿದ್‌ಗಳಲ್ಲಿ ನವೀನಾಚರಣೆಗಳನ್ನು ಪ್ರವೇಶಗೊಳಿಸದೆ ಇರುತ್ತಿದ್ದರೆ, ಖಾತಮುನ್ನಬಿಯ್ಯೀನ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯವಾದ ನುಬುವ್ವತನ್ನು ನಂಬಿ ಅವರ ನಡೆವಳಿಕೆಗಳನ್ನೂ ಹೆಜ್ಜೆ ಗುರುತುಗಳನ್ನೂ ತಮ್ಮ ಮಾರ್ಗದರ್ಶಕವನ್ನಾಗಿ ಮಾಡಿಕೊಂಡು ಜೀವಿಸುತ್ತಿದ್ದರೆ ನಾನು ಆಗಮಿಸುವ ಆವಶ್ಯಕತೆ ಇರುತ್ತಿರಲಿಲ್ಲ. ನಿಮ್ಮ ನವೀನಾಚರಣೆಗಳು ಮತ್ತು ನವೀನ ನುಬುವ್ವತ್‌ಗಳು ಅಲ್ಲಾಹನ ಅಭಿಮಾನವನ್ನು ಉತ್ತೇಜಿಸಿತು ಮತ್ತು ಅಲ್ಲಾಹನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಚಾದರವನ್ನು ಹೊದಿಸಿದ ಒಬ್ಬನನ್ನು ನಿಯೋಗಿಸಿದನು– ಸುಳ್ಳು ನುಬುವ್ವತ್‌ಗಳ ವಿಗ್ರಹಗಳನ್ನು ಒಡೆದು ಹಾಕಿ ನಿರ್ನಾಮಗೊಳಿಸಲಿಕ್ಕೋಸ್ಕರ. ಇದೇ ಕೆಲಸಕ್ಕೋಸ್ಕರ ಅಲ್ಲಾಹನು ನನ್ನನ್ನು ನಿಯೋಜಿಸಿರುವನು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ದರ್ಗಾಗಳಲ್ಲಿ ಸಾಷ್ಟಾಂಗ ಪ್ರಣಾಮ ಮಾಡುವುದು ಅಥವಾ ದರ್ಗಾಗಳನ್ನು ಪ್ರದಕ್ಷಿಣೆ ಮಾಡುವುದು ಸಮಾನ್ಯವಾಗಿ ಬಿಟ್ಟಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನುಬುವ್ವತ್ತನ್ನು ಮತ್ತು ಗೌರವವನ್ನು ಪುನಃ ಸ್ಥಾಪಿಸಲಿಕ್ಕಾಗಿಯೇ ಅಲ್ಲಾಹನು ಈ ಜಮಾಅತನ್ನು ಸ್ಥಾಪಿಸಿರುವನು. ಒಬ್ಬನು ಯಾರನ್ನಾದರೂ ಪ್ರೇಮಿಸುವುದಾದರೆ ಮತ್ತು ಹಾಗೆ ಪ್ರೇಮಿಸಲ್ಪಡುವವರು ಬೇರೆ ಸಾವಿರಾರು ಇದ್ದರೆ ಈ ಪ್ರೇಮದ ವೈಶಿಷ್ಟ್ಯವೇನಿರುತ್ತದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪ್ರೇಮದಲ್ಲಿ ತಲ್ಲೀನರಾಗಿರುವುದಾಗಿ ವಾದಿಸುವ ಈ ಜನರು ಸಾವಿರಾರು ದರ್ಗಾಗಳನ್ನು ಪೂಜಿಸುತ್ತಾರೆ. ಇವರು ಮದೀನಕ್ಕೆ ಹೋಗುತ್ತಾರೆ. ಅದರೊಂದಿಗೆ ಅಜ್‌ಮೀರ್ ಮತ್ತು ಇತರ ದರ್ಗಾಗಳಿಗೆ ಬರಿತಲೆಯಲ್ಲೂ ಬರಿಗಾಲಲ್ಲೂ ಹೋಗುತ್ತಾರೆ. ಪಾಕ್‌ಪಟನ್‌ನಲ್ಲಿರುವ ದರ್ಗಾದ ಕಿಟಕಿ ಮೂಲಕ ದಾಟಿ ಹೋದರೆ ಮೋಕ್ಷ ಸಿಗುತ್ತದೆ ಎಂದು ನಂಬುತ್ತಾರೆ. ಒಬ್ಬ ಒಂದು ಪತಾಕೆ ಹಾರಿಸಿಟ್ಟಿರುತ್ತಾನೆ. ಇನ್ನೊಬ್ಬ ಬೇರೊಂದು ರೂಪ ಹೊಂದಿರುತ್ತಾನೆ. ಈ ಜನರ ಉರೂಸ್‌ಗಳನ್ನೂ ಮೇಳಗಳನ್ನೂ ನೋಡುವಾಗ ಓರ್ವ ಯಥಾರ್ಥ ಮುಸ್ಲಿಮನ ಹೃದಯ ಕಂಪಿಸುತ್ತದೆ. ಈ ಜನರು ಏನೆಲ್ಲಾ ಮಾಡಿಬಿಟ್ಟಿದ್ದಾರೆ. ಅಲ್ಲಾಹನಿಗೆ ಇಸ್ಲಾಮ್ ಬಗ್ಗೆ ಅಭಿಮಾನವಿಲ್ಲದಿರುತ್ತಿದ್ದರೆ, **ಇನ್ನದ್ದೀನ ಇಂದಲ್ಲಾಹಿಲ್ ಇಸ್ಲಾಮ್** (ಅಲ್ಲಾಹನ ಬಳಿ ಸ್ವೀಕಾರಾರ್ಹ ಧರ್ಮ ಇಸ್ಲಾಂ ಮಾತ್ರವಾಗಿದೆ) ಎಂದು ಅಲ್ಲಾಹನು ಹೇಳದೆ ಇರುತ್ತಿದ್ದರೆ ಮತ್ತು ಅಲ್ಲಾಹನು **ಇನ್ನಾ ನಹ್‌ನು ನಝ್ಝಲ್‌ನ ಝ್ಝಿಕ್‌ರ ವ ಇನ್ನಾ ಲಹು ಲಾ ಹಾಫಿಝೂನ್** (ನಾವೇ ಪವಿತ್ರ ಖುರ್‌ಆನನ್ನು ಅವತೀರ್ಣಗೊಳಿಸಿದ್ದೇವೆ. ನಾವೇ ಅದನ್ನು ಸಂರಕ್ಷಿಸುವೆವು) ಎಂದು ಹೇಳದೆ ಇರುತ್ತಿದ್ದರೆ, ಇಂದು ಇಸ್ಲಾಮ್ ಯಾವ ಸ್ಥಿತಿಗೆ ತಲಪಿದೆಯೋ ಆ ಸ್ಥಿತಿಯಲ್ಲಿ ಅದು ಅಳಿಸಿ ಹೋಗುವ ಬಗ್ಗೆ ಯಾವ ಸಂಶಯವೂ ಇರುತ್ತಿರಲಿಲ್ಲ. ಆದರೆ ಅಲ್ಲಾಹನ ಅಭಿಮಾನ ಉತ್ತೇಜಿಸಿತು. ಅವನು ಅನುಗ್ರಹ ಮತ್ತು ಸಂರಕ್ಷಣೆ ನೀಡುವುದಾಗಿ ಮಾಡಿದ ವಾಗ್ದಾನ, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪ್ರತಿಬಿಂಬವಾಗಿ ಒಬ್ಬನನ್ನು ನಿಯೋಜಿಸಬೇಕೆಂದು ಆವಶ್ಯಪಟ್ಟಿತು. ಹಾಗೆ ಈ ಕಾಲಘಟ್ಟದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನುಬುವ್ವತನ್ನು ಪುನಶ್ಚೇತನಗೊಳಿಸಿ ತೋರಿಸಿಕೊಡುವುದಕ್ಕಾಗಿ ಅಲ್ಲಾಹನು ಈ ಜಮಾಅತನ್ನು ಸ್ಥಾಪಿಸಿದನು. ನನ್ನನ್ನು ಮಹ್‌ದಿಯನ್ನಾಗಿ ನಿಯೋಜಿಸಿ ಕಳುಹಿಸಿದನು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ: ನನ್ನ ಆಗಮನದ ಮೂಲ ಉದ್ದೇಶ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ವೈಭವವನ್ನು

ಸ್ಥಾಪಿಸುವುದಾಗಿದೆ. ನನ್ನ ಬಗ್ಗೆ ಪ್ರಸ್ತಾಪ ನಂತರದ್ದಾಗಿದೆ. ಏಕೆಂದರೆ ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಲ್ಲಿ ಅನುಗ್ರಹ ನೀಡುವ ಶಕ್ತಿ ಇದೆ. ಈ ಅನುಗ್ರಹ ಪಡೆದುದಕ್ಕೆ ಸಂಬಂಧಿಸಿ ನನ್ನ ಪ್ರಸ್ತಾಪ ಬಂದಿದೆ. ಎಂದರೆ ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅನುಗ್ರಹ ತಲುಪಿಸುವವರಾಗಿದ್ದಾರೆ. ಈ ಅನುಗ್ರಹ ಪಡೆದ ಕಾರಣದಿಂದ ತನ್ನ ಬಗ್ಗೆ ಪ್ರಸ್ತಾಪ ಬಂದಿದೆ ಎಂದು ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ. ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅನುಗ್ರಹವೇ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಈ ಸ್ಥಾನ ನೀಡಿತು. ಎಂದರೆ ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅನುಗ್ರಹದ ವಲಯ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ತನ್ನೊಳಗೆ ಎತ್ತಿಕೊಂಡಿತು. ಆಗ ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪ್ರಸ್ತಾಪದೊಂದಿಗೆ ಅವರ ಸತ್ಯಸಂಧನಾದ ಪ್ರೇಮಿಯ ಹೆಸರು ಸಹ ಸೇರಿತು.

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತನ್ನ ಆಗಮನದ ಉದ್ದೇಶ, ಒಂದು ಸಾವಿರ ವರ್ಷದ ಅಂಧಕಾರಮಯ ಕಾಲದಲ್ಲಿ ಮುಸ್ಲಿಮರಲ್ಲಿ ತಲೆದೋರಿರುವ ನವೀನಾಚರಣೆಗಳನ್ನು ಸುಧಾರಣೆ ಮಾಡುವುದಾಗಿದೆ ಎನ್ನುವುದರ ಬಗ್ಗೆ ಹೀಗೆ ಹೇಳಿದ್ದಾರೆ: ನಾನು ಪುನಃ ಹೇಳುತ್ತೇನೆ– ಅಲ್ಲಾಹನ ಕಡೆಯಿಂದ ಆಗಮಿಸುವವರು ಯಾವುದೇ ಕೆಟ್ಟದಾದ ಮಾತನ್ನು ಹೇಳುವುದಿಲ್ಲ. ಅವರು ಹೇಳುವುದು ಅಲ್ಲಾಹನನ್ನು ಮಾತ್ರ ಆರಾಧಿಸಿರಿ ಎಂದು. ಸೃಷ್ಟಿಗಳೊಂದಿಗೆ ಒಳ್ಳೆಯ ರೀತಿಯಲ್ಲಿ ವರ್ತಿಸಿರಿ. ನಮಾಝ್‌ಗಳನ್ನು ಅನುಷ್ಠಿಸಿರಿ. ಧರ್ಮದಲ್ಲಿ ತಲೆದೋರಿರುವ ತಪ್ಪುಗಳನ್ನು ನಿವಾರಿಸಿರಿ ಎಂದು ಅವರು ಹೇಳುತ್ತಾರೆ. ಆದುದರಿಂದ ನಾನು ಆಗಮಿಸಿರುವುದು ಈ ಕೆಟ್ಟ ಕಾಲಘಟ್ಟದಲ್ಲಿ ತಲೆದೋರಿರುವ ತಪ್ಪುಗಳನ್ನು ಸುಧಾರಣೆ ಮಾಡಲಿಕ್ಕಾಗಿದೆ. ಎಲ್ಲದಕ್ಕಿಂತಲೂ ದೊಡ್ಡ ತಪ್ಪೇನೆಂದರೆ ಅಲ್ಲಾಹನ ಮಹತ್ವವನ್ನೂ ವೈಭವದ ಸ್ಥಾನವನ್ನೂ ಮಣ್ಣುಪಾಲು ಮಾಡಲಾಗಿದೆ. ಒಂದು ಕಡೆ ಕ್ರೈಸ್ತರು ಹೇಳುತ್ತಾರೆ: ಯೇಸು ಜೀವಿಸಿದ್ದಾರೆ. ನಿಮ್ಮ ಪ್ರವಾದಿ ಜೀವಿಸಿಲ್ಲ. ಆ ಮೂಲಕ ಅವರು ಹಝ್‌ರತ್ ಈಸಾ ಮಸೀಹರನ್ನು ದೇವನೆಂದೂ ದೇವ ಪುತ್ರನೆಂದೂ ಹೇಳುತ್ತಾರೆ. ಏಕೆಂದರೆ ಎರಡು ಸಾವಿರ ವರ್ಷಗಳಿಂದ ಅವರು ಜೀವಂತವಾಗಿದ್ದಾರೆ. ಕಾಲ ಕಳೆದುದರ ಪರಿಣಾಮ ಅವರ ಮೇಲೆ ಏನೂ ಆಗಿಲ್ಲ. ಇನ್ನೊಂದು ಕಡೆ ಮುಸ್ಲಿಮರು ಸಹ ಹೇಳುತ್ತಾರೆ: ನಿಸ್ಸಂಶಯವಾಗಿ ಈಸಾ ಮಸೀಹ್ ಜೀವ ಸಹಿತ ಆಕಾಶಕ್ಕೆ ಏರಿ ಹೋಗಿರುವರು. ಎರಡು ಸಾವಿರ ವರ್ಷಗಳಿಂದ ಅವರು ಅಲ್ಲಿದ್ದಾರೆ. ಅವರಲ್ಲಿ ಯಾವ ಬದಲಾವಣೆಯೂ ಉಂಟಾಗಿಲ್ಲ. ಆದರೆ ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಿಧನ ಹೊಂದಿರುವರು. ಒಬ್ಬ ಮುಸ್ಲಿಮ್ ಮೌಲವಿಯ ಬಾಯಿಯಿಂದ ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮೃತರಾದರೆಂದು ಹೇಳುವ ಮಾತನ್ನು ಕೇಳುವಾಗ ನನ್ನ ಹೃದಯ ಕಂಪಿಸುತ್ತದೆ. ಜೀವಂತ ಪ್ರವಾದಿಯನ್ನು ಮೃತರೆಂದು ಹೇಳುತ್ತಾರೆ. ಇದಕ್ಕಿಂತ ದೊಡ್ಡ ಅಪಮಾನ ಇಸ್ಲಾಮಿಗೆ ಬೇರೆ ಏನಿದೆ. ಆದರೆ ಈ ತಪ್ಪು ಮಾಡುತ್ತಿರುವುದು ಸ್ವತಃ ಮುಸ್ಲಿಮರಾಗಿದ್ದಾರೆ. ಅವರು ಪವಿತ್ರ ಖುರ್‌ಆನಿನ ಸ್ಪಷ್ಟ ಪ್ರಸ್ತಾಪಕ್ಕೆ ವಿರುದ್ಧವಾಗಿ ಒಂದು ಹೊಸ ವಿಚಾರ ಸೃಷ್ಟಿಸಿದ್ದಾರೆ. ಪವಿತ್ರ ಖುರ್‌ಆನಿನಲ್ಲಿ ಈಸಾ ಮಸೀಹರು ಮೃತರಾದ ಬಗ್ಗೆ ಬಹಳ ಸ್ಪಷ್ಟವಾಗಿ ಪ್ರಸ್ತಾಪಿಸಲಾಗಿದೆ. ಆದರೆ ಮುಸ್ಲಿಮರ ಈ ತಪ್ಪನ್ನು ತಿದ್ದುವ ಕೆಲಸ ನನಗೆಯೇ ಮೀಸಲಾಗಿ ಇಡಲಾಗಿತ್ತು. ಏಕೆಂದರೆ ನನ್ನ ಹೆಸರನ್ನು ಅಲ್ಲಾಹನು **ಹಕಮ್** ಎಂದು ಇರಿಸಿದ್ದಾನೆ. ಅಲ್ಲಾಹನು ಯಾರನ್ನು **ಹಕಮ್** ಆಗಿ ಕಳುಹಿಸಿರುವನೋ ಆ ವ್ಯಕ್ತಿಗೆ ಈ ವಿಷಯ ರಹಸ್ಯವಾಗಿಡಲು ಸಾಧ್ಯವಿಲ್ಲ. ಗರ್ಭಿಣಿಯ ಗರ್ಭವನ್ನು ದಾಯಿಯಿಂದ ಮರೆಮಾಡಲು ಸಾಧ್ಯವೇ? ಪವಿತ್ರ ಖುರ್‌ಆನ್ ಸ್ಪಷ್ಟವಾಗಿ ತೀರ್ಮಾನಿಸಿದೆ ಮಸೀಹ್ ಮೌಊದ್ ಕೊನೆಯ ಖಲೀಫರಾಗುವರೆಂದು. ಆ ಖಲೀಫ ಆಗಮಿಸಿರುವರು. ಈಗ ಯಾರಾದರೂ ಅಂಧಕಾರ ಕಾಲ ಘಟ್ಟದ ಜನರ ಅಭಿಪ್ರಾಯವನ್ನು ಅಂಗೀಕರಿಸುವುದಾದರೆ ಅವನು ಸ್ವತಃ ಹಾನಿಯನ್ನು ಅನುಭವಿಸುವನಲ್ಲದೆ ಇಸ್ಲಾಮಿಗೆ ಸಹ ಹಾನಿಯನ್ನುಂಟುಮಾಡುವವನಾಗುವನು. ವಾಸ್ತವಿಕವಾಗಿ ತಪ್ಪಾದ ಈ ನಿಕೃಷ್ಟ ನಂಬಿಕೆಯು ಲಕ್ಷಾಂತರ ಮುಸ್ಲಿಮರನ್ನು ಮುರ್ತದ್ (ಧರ್ಮತ್ಯಾಗಿ)ಗಳನ್ನಾಗಿ ಮಾಡಿದೆ. ಈ ನಂಬಿಕೆ ಇಸ್ಲಾಮಿಗೆ ಹಾನಿಕರವೂ ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಅಪಮಾನಕರವೂ ಆಗಿದೆ.

ಮೃತರನ್ನು ಜೀವಂತಗೊಳಿಸುವವರು, ಆಕಾಶಕ್ಕೆ ಏರಿ ಹೋದವರು, ಕೊನೆಗೆ ನ್ಯಾಯ ತೀರ್ಮಾನ ಮಾಡಲು ಬರುವವರು ಯೇಸು ಮಸೀಹ ಎಂದು ನಂಬುವುದಾದರೆ ನಮ್ಮ ಪ್ರವಾದಿ ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಅವರ ಮುಂದೆ ಏನೂ ಇಲ್ಲದವರಾಗುವರು (ಮಆದಲ್ಲಾಹ್– ಹಾಗೆ ಹೇಳುವುದರಿಂದ ಅಲ್ಲಾಹನ ಅಭಯ ಯಾಚಿಸುತ್ತೇವೆ). ಆದರೆ ಅಲ್ಲಾಹನು ಅವರನ್ನು **ರಹ್ಮತುನ್ ಲಿಲ್ ಆಲಮೀನ್** ಸರ್ವಲೋಕಗಳಿಗೆ ಅನುಗ್ರಹವಾಗಿರುವವರು ಎಂದು ಘೋಷಿಸಿರುವನು. ಅವರು **ಕಾಫ್ಫತುನ್‌ಲಿನ್ನಾಸ್** ಸರ್ವ ಜನರಿಗೂ ಸಂದೇಶ ವಾಹಕರಾಗಿ ಆಗಮಿಸಿದರು. ಅವರೇ ಖಾತಮುನ್ನಬಿಯ್ಯೀನ್ ಆಗಿದ್ದಾರೆ. ಮುಸ್ಲಿಮರೆಂದು ಹೇಳಿಕೊಳ್ಳುತ್ತಾ ಇಂತಹ ತಪ್ಪು ನಂಬಿಕೆ ಹೊಂದಿರುವವರು ಹೀಗೆ ಸಹ ನಂಬುತ್ತಾರೆ– ಲೋಕದಲ್ಲಿರುವ ಪಕ್ಷಿಗಳಲ್ಲಿ ಕೆಲವು ಈಸಾ ಮಸೀಹರು ಸೃಷ್ಟಿಸಿದವುಗಳಾಗಿವೆ. ಕೆಲವು ಅಲ್ಲಾಹನು ಸೃಷ್ಟಿಸಿದವುಗಳಾಗಿವೆ (ನಊದುಬಿಲ್ಲಾಹಿ ಮಿನ್‌ದಾಲಿಕ್). ಏಕದೇವ ವಿಶ್ವಾಸಿಯಾದ ಒಬ್ಬ ಮೌಲವಿಯೊಂದಿಗೆ ನಾನು ಒಮ್ಮೆ ಕೇಳಿದೆ: ಎರಡು ಪಕ್ಷಿಗಳನ್ನು ತಂದು ದೇವನು ಸೃಷ್ಟಿಸಿದ್ದು ಯಾವುದು ಈಸಾ ಮಸೀಹ್ ಸೃಷ್ಟಿಸಿದ್ದು ಯಾವುದು ಎಂದು ಕೇಳಿದರೆ ನೀವು ಏನು ಉತ್ತರ ನೀಡುವಿರಿ ಎಂದು ಕೇಳಿದೆ. ಆಗ ಆ ಮೌಲವಿ ಹೇಳಿದರು: ಅವುಗಳೆಲ್ಲಾ ಒಟ್ಟಿಗೆ ಬೆರೆತು ಹೋಗಿವೆ ಎಂದು.

ಈಗ ನಾನು ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಸಂಬಂಧಿಸಿದ ಕೆಲವು ಘಟನೆಗಳನ್ನು ವಿವರಿಸುವೆನು. ಅವುಗಳಿಂದ ಸಾಬೀತಾಗುವುದೇನೆಂದರೆ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಉನ್ನತ ಸ್ಥಾನವನ್ನು ಸಾಬೀತು ಗೊಳಿಸಿರುವುದು ಕೇವಲ ಬುದ್ಧಿಯನ್ನು ಉಪಯೋಗಿಸಿ ಮಾತ್ರವಲ್ಲ, ಇಸ್ಲಾಮೀ ಉಪದೇಶಗಳ ಕೃತ್ಯರೂಪದ ಪ್ರಕಟಣೆ ಅವರ ಉಪದೇಶಗಳಿಂದಲೂ ನಡೆವಳಿಕೆಗಳಿಂದಲೂ ಸಾಬೀತಾಗುತ್ತದೆ ಎಂದು. ಅಬ್ದುಲ್ ಹಖ್ ಎಂಬ ಒಬ್ಬ ಯುವಕ ಇಸ್ಲಾಮ್ ಧರ್ಮ ಬಿಟ್ಟು ಕ್ರೈಸ್ತ ಮತಕ್ಕೆ ಸೇರಿದ್ದನು. ಅವನು ಸತ್ಯವನ್ನು ಅನ್ವೇಷಿಸುತ್ತಾ ಖಾದಿಯಾನಿಗೆ ಬಂದನು. ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ

ಸಮೀಪ ಕೆಲವು ದಿನ ಇದ್ದನು. ವಿವಿಧ ಸಂದರ್ಭಗಳಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಆತನಿಗೆ ವಿವಿಧ ವಿಷಯಗಳನ್ನು ವಿವರಿಸಿ ಕೊಡುತ್ತಿದ್ದರು. ಒಂದು ದಿವಸ ಆ ವ್ಯಕ್ತಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಹೇಳಿದನು: ಒಬ್ಬ ಕ್ರೈಸ್ತನ ಮುಂದೆ ನಾನು ನಿಮ್ಮ ಹೆಸರು ಹೇಳಿದಾಗ ಅವನು ನಿಮ್ಮನ್ನು ಬೈದನು. ನನಗೆ ಅದು ಬಹಳ ಅತೃಪ್ತಿಕರವಾಗಿತ್ತು. ಆಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ನನ್ನನ್ನು ಬೈಯ್ಯುತ್ತಾರೆ. ಅದರ ಬಗ್ಗೆ ನನಗೆ ಚಿಂತೆ ಇಲ್ಲ. ಅನೇಕ ಪತ್ರಗಳು ನನಗೆ ಬರುತ್ತವೆ. ಕೆಲವು ಪತ್ರಗಳಿಗೆ ನಾನು ಬೇರಿಂಗ್ ಚಾರ್ಜ್ ಸಹ ನೀಡಬೇಕಾಗುತ್ತದೆ. ಅವುಗಳನ್ನು ತೆರೆದಾಗ ಅವುಗಳೊಳಗೆ ಬೈಗಳು ತುಂಬಿರುತ್ತವೆ. ಇದಲ್ಲದೆ ಕರಪತ್ರಗಳಲ್ಲಿಯೂ ಬೈಗಳು ತುಂಬಿರುತ್ತವೆ. (ಈಗ ಪಾಕಿಸ್ತಾನದಲ್ಲಿ ಇದೇ ಸ್ಥಿತಿಯಾಗಿದೆ. ದೊಡ್ಡ ದೊಡ್ಡ ಜಾಹಿರಾತು ಪ್ರಕಟಿಸುತ್ತಾರೆ. ಬೈಗಳನ್ನು ತುಂಬಿಸಿ ತೆರೆದ ಅಂಚೆಯಲ್ಲಿ ಕಳುಹಿಸುತ್ತಾರೆ. ಆದರೆ ಇವುಗಳಿಂದ ಪ್ರಯೋಜನವೇನು. ಅಲ್ಲಾಹನ ಪ್ರಕಾಶವನ್ನು ನಂದಿಸಲು ಸಾಧ್ಯವೇ? ಯಾವಾಗಲೂ ಪ್ರವಾದಿಗಳೊಂದಿಗೆ ಮತ್ತು ಸತ್ಯವಂತರೊಂದಿಗೆ ಕೃತಘ್ನರಾದವರು ಹೀಗೆಯೇ ವರ್ತಿಸುತ್ತಾರೆ.) ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಕ್ರೈಸ್ತನಾದ ಆ ವ್ಯಕ್ತಿಯೊಂದಿಗೆ ಈಸಾ ಮಸೀಹರ ಉದಾಹರಣೆ ನೀಡುತ್ತಾ ಹೇಳಿದರು: ನಾವು ಈಸಾ ಮಸೀಹರ ಹೆಜ್ಜೆ ಗುರುತಿನಲ್ಲಿ ಆಗಮಿಸಿದೆವು. ಅವರೊಂದಿಗೆ ಜನರು ಹೇಗೆ ವರ್ತಿಸಿದರು? ಅವರನ್ನು ಬೈಯ್ಯಲಾಗುತ್ತಿತ್ತು. ಅವರ ಮೇಲೆ ದೌರ್ಜನ್ಯ ಮಾಡಲಾಯಿತು. ಶಿಲುಬೆಗೆ ಏರಿಸಲಾಗಿತ್ತು. ನಮ್ಮ ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಜನರು ಹೇಗೆ ವರ್ತಿಸಿದರು. ಈಗಲೂ ಸಹ ಕೊಳಕು ಮನಸಿನ ಜನರು ಅವರನ್ನು ಬೈಯ್ಯುತ್ತಾ ಇರುತ್ತಾರೆ. ನಾನಾದರೋ ಮಾನವರ ವಾಸ್ತವಿಕ ಹಿತೈಷಿ ಆಗಿದ್ದೇನೆ. ಯಾರು ನನ್ನನ್ನು ಶತ್ರು ಎಂದು ಭಾವಿಸುತ್ತಾನೋ ಅವನು ಸ್ವತಃ ತನಗೆ ತಾನೇ ಶತ್ರುವಾಗಿದ್ದಾನೆ.

ಅಬ್ದುಲ್ ಹಖ್ ಎಂಬ ಆ ವ್ಯಕ್ತಿ ಕೆಲವು ದಿನಗಳ ಕಾಲ ಅಲ್ಲಿದ್ದನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಚರ್ಚಿಸುತ್ತಿದ್ದನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಆತನ ವಿವಿಧ ಪ್ರಶ್ನೆಗಳಿಗೆ ಉತ್ತರ ನೀಡುತ್ತಾ ಇದ್ದರು. ಒಂದು ದಿನ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಆತನೊಡನೆ ಹೀಗೆ ಹೇಳಿದರು: ನಾನು ನಿಮ್ಮೊಂದಿಗೆ ಪದೇ ಪದೇ ಹೇಳುವುದೇನೆಂದರೆ, ನಿಮಗೆ ಯಾವುದಾದರೂ ಒಂದು ವಿಷಯ ಮನವರಿಕೆ ಆಗದಿದ್ದರೆ ಅದರ ಬಗ್ಗೆ ಪುನಃ ಪುನಃ ಕೇಳಿರಿ. ನಿಮಗೆ ಒಂದು ವಿಷಯ ಮನವರಿಕೆ ಆಗದೆ ಇರುವಾಗ ಆ ವಿಷಯ ಮನವರಿಕೆ ಆಗಿದೆ ಎಂದು ಹೇಳುವುದು ಸರಿಯಲ್ಲ. ಅದರ ಪರಿಣಾಮ ಕೆಟ್ಟದಾಗುತ್ತದೆ ಎಂದು ಹೇಳಿದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಧೈರ್ಯ ನೀಡುತ್ತಾ ಪದೇ ಪದೇ ಹೇಳುತ್ತಿದ್ದುದು ನೀವು ಪ್ರಶ್ನೆ ಕೇಳಿರಿ ಎಂದಾಗಿತ್ತು. ಜನರಿಗೆ ಸತ್ಯ ಮನವರಿಕೆ ಆಗಲಿ ಮತ್ತು ಅವರು ಸತ್ಯವನ್ನು ಅಂಗೀಕರಿಸಲಿ ಎಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಬಹಳ ಅತ್ಯಾಸಕ್ತಿ ಇತ್ತು.

ರೋಗಿಯನ್ನು ಸಂದರ್ಶಿಸಿದ ಒಂದು ಘಟನೆ ವಿವರಿಸುತ್ತೇನೆ. ಇಂದಿನ ಕಾಲದ ಫೀರ್ ಫಕೀರರ ಹಾಗೆ 'ನಾನು ಪ್ರಾರ್ಥಿಸುತ್ತೇನೆ. ನನ್ನ ಪ್ರಾರ್ಥನೆ ಅಲ್ಲಾಹನು ಅಂಗೀಕರಿಸುವನು' ಎಂದು ಬಡಾಯಿ ಕೊಚ್ಚದೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಅಲ್ಲಾಹನ ಏಕತ್ವ ಮತ್ತು ಪ್ರಾರ್ಥನೆ ಅಂಗೀಕಾರದ ತತ್ವವನ್ನೂ ಅಲ್ಲಾಹನಿಗೆ ತೃಪ್ತಿಕರವಾಗಿ ತನ್ನ ಸ್ಥಿತಿ ಬದಲಾಯಿಸುವ ಬಗ್ಗೆಯೂ ರೋಗಿಗೆ ಉಪದೇಶಿಸಿದರು. ಘಟನೆ ಹೀಗಿದೆ– ಖುರೈಶಿ ಸಾಹೇಬರು ರೋಗಿಯಾಗಿದ್ದರು. ಅವರು ಖಲೀಫತುಲ್ ಮಸೀಹ್ ಅವ್ವಲ್‌ರಿಂದ ಚಿಕಿತ್ಸೆ ಪಡೆಯುತ್ತಿದ್ದರು. ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಅನೇಕ ಸಲ ಪ್ರಾರ್ಥಿಸಲು ಅಪೇಕ್ಷಿಸಿದ್ದರು. ನಾವು ನಿಮಗೋಸ್ಕರ ಪ್ರಾರ್ಥಿಸುವೆವು ಎಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಿದ್ದರು. ಒಂದು ದಿನ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಮನೆಗೆ ಹೋದರು. ಅವರೊಡನೆ ಹೇಳಿದರು: ನಾನು ಪ್ರಾರ್ಥಿಸಿದೆ. ಆದರೆ ಮುಖ್ಯ ವಿಷಯವೇನೆಂದರೆ ಅಲ್ಲಾಹನು ಇಚ್ಛಿಸದಿದ್ದರೆ ಕೇವಲ ಪ್ರಾರ್ಥನೆಯಿಂದ ಯಾವ ಲಾಭವೂ ಸಿಗಲಾರದು. ಅಲ್ಲಾಹನು ಅನುಗ್ರಹ ನೀಡುವಾಗ ಯಾವ ಕಷ್ಟವೂ ಬಾಕಿಯಾಗಿ ಉಳಿಯಲಾರದು. ಅದಕ್ಕೆ ಆವಶ್ಯಕವಾದುದು ಏನೆಂದರೆ ಮನುಷ್ಯನು ತನ್ನೊಳಗೆ ಉತ್ತಮ ಬದಲಾವಣೆ ಉಂಟುಮಾಡಬೇಕು. ಅಲ್ಲಾಹನು ಯಾರ ಬಗ್ಗೆ ಅವನು ಜನರಿಗೆ ಪ್ರಯೋಜನಕಾರಿ ಎಂದು ಗಣಿಸುತ್ತಾನೋ ಅವನ ಜೀವಿತವನ್ನು ವರ್ಧಿಸುತ್ತಾನೆ. ಎಂದರೆ ಅವನ ಆಯುಸ್ಸನ್ನು ದೀರ್ಘಗೊಳಿಸುತ್ತಾನೆ.

ಸತ್ಯವಾದ ವಿಷಯವೇನೆಂದರೆ ಮನುಷ್ಯನ ದೇಹದೊಳಗೆ ಹೋಗುವ ಪ್ರತಿಯೊಂದು ಕಣವು ಅಲ್ಲಾಹನ ಅನುಮತಿಗಳಿಸದೆ ಪ್ರಯೋಜನಕರವಾಗಲಾರದು. ತೌಬ ಮತ್ತು ಇಸ್ತಿಗ್‌ಫಾರ್ ಪ್ರಾರ್ಥನೆ ಬಹಳ ಮಾಡಬೇಕು. ಆಗ ಅಲ್ಲಾಹನ ಅನುಗ್ರಹ ಲಭಿಸುತ್ತದೆ. ಅಲ್ಲಾಹನು ಅನುಗ್ರಹಿಸುವಾಗ ಪ್ರಾರ್ಥನೆ ಸಹ ಅಂಗೀಕರಿಸಲ್ಪಡುತ್ತದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನನ್ನ ಅಭಿಪ್ರಾಯದಲ್ಲಿ, ಶತ್ರುಗಳಿಗಾಗಿಯೂ ಪ್ರಾರ್ಥನೆ ಮಾಡುವ ತನಕ ಹೃದಯ ಪೂರ್ಣವಾಗಿ ಶುದ್ಧೀಕರಿಸಲ್ಪಡುವುದಿಲ್ಲ. ಅಲ್ಲಾಹನು **ಉದ್‌ಊನೀ ಅಸ್ತಜಿಬ್‌ಲಕುಮ್** ನೀವು ನನ್ನನ್ನು ಬೇಡಿಕೊಂಡರೆ ಉತ್ತರ ನೀಡುವೆನು ಎಂದು ಹೇಳಿದಾಗ ಯಾವುದೇ ಪರಿಮಿತಿಯನ್ನು ನಿಗದಿಪಡಿಸಿಲ್ಲ. ಶತ್ರುವಿನ ಪರವಾಗಿ ಪ್ರಾರ್ಥಿಸಿದರೆ ಅಂಗೀಕರಿಸಲಾರೆನು ಎಂದು ಹೇಳಿಲ್ಲ. ನನ್ನ ಅಭಿಪ್ರಾಯದಲ್ಲಿ ಶತ್ರುವಿಗೋಸ್ಕರ ಸಹ ಪ್ರಾರ್ಥಿಸಬೇಕು. ಇದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಡೆವಳಿಕೆ ಸಹ ಆಗಿದೆ. ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹು ಪ್ರಾರ್ಥನೆಗಳ ಕಾರಣದಿಂದಲೇ ಮುಸ್ಲಿಮರಾಗಿದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರಿಗೋಸ್ಕರ ಅನೇಕ ಸಲ ಪ್ರಾರ್ಥಿಸುತ್ತಿದ್ದರು. ಆದುದರಿಂದ ಜಿಪುಣತನದಿಂದ ವೈಯಕ್ತಿಕ ಹಗೆತನ ಮಾಡಬಾರದು. ವಾಸ್ತವಿಕವಾಗಿ ಹಾನಿಯನ್ನುಂಟು ಮಾಡುವವರಾಗಬಾರದು. ಅಲ್ಲಾಹನಿಗೆ ಕೃತಜ್ಞತೆಗಳು– ನಾನು ಎರಡು ಮೂರು ಸಾರಿ ಅವರ ಪರವಾಗಿ ಪ್ರಾರ್ಥಿಸದೆ ಇರುವ ಒಬ್ಬ ಶತ್ರುವೂ ನನಗಿಲ್ಲ. ಅಂತಹ ಒಬ್ಬ ಶತ್ರುವೂ ಇಲ್ಲ. ಇದನ್ನೇ ನಾನು ನಿಮಗೂ ಉಪದೇಶಿಸುತ್ತೇನೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಮ್ಮ ಮುಂದೆ ಇರಿಸಿದ, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಡೆವಳಿಕೆ ಪ್ರಕಾರ ಇಸ್ಲಾಮ್ ಧರ್ಮದ ಸತ್ಯವಾದ ತತ್ವೋಪದೇಶಗಳ ಬೃಹತ್ತಾದ ಭಂಡಾರದಿಂದ ಕೆಲವು ವಿಷಯಗಳನ್ನು ಮಾತ್ರ ನಿಮ್ಮ ಮುಂದೆ ನಾನು ವಿವರಿಸಿರುವೆನು. ಇವುಗಳಿಂದ ಸ್ಪಷ್ಟವಾಗಿ

ತಿಳಿಯುವುದೇನೆಂದರೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಡೆವಳಿಕೆಗಳನ್ನು ಮತ್ತು ಪವಿತ್ರ ಖುರ್ಆನಿನ ಉಪದೇಶಗಳನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಅನುಸರಿಸುವುದರಲ್ಲಿಯೂ ಕಾರ್ಯಗತಗೊಳಿಸುವುದರಲ್ಲಿಯೂ ನಿರತರಾಗಿದ್ದರು ಎಂದು. ಅವರು ಕೇವಲ ಖತ್ಮೆನುಬುವ್ವತ್ ಘೋಷಣೆ ಕೂಗುವುದಕ್ಕೆ ತನ್ನನ್ನು ಸೀಮಿತಗೊಳಿಸದೆ ತನ್ನ ಪ್ರತಿಯೊಂದು ಮಾತು ಮತ್ತು ಕೃತ್ಯ ತನ್ನ ಯಜಮಾನರಾದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅನುಸರಣೆಯ ಮೇಲೆ ರೂಪುಗೊಳಿಸಿದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಉಪದೇಶಗಳನ್ನೂ ಶರೀಅತನ್ನೂ ಸ್ಥಾಪಿಸುವ ಹಂಬಲ ಅವರಿಗಿತ್ತು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಅವತೀರ್ಣಗೊಂಡ ಸುಂದರ ಉಪದೇಶಗಳೇ ಮೋಕ್ಷದಾಯಕವೆಂದು ಲೋಕದ ಜನರಿಗೆ ತಿಳಿಯಬೇಕೆಂದು ಅವರು ಆಶಿಸಿದ್ದರು. ಈ ಉಪದೇಶಗಳನ್ನು ಅನುಸರಿಸಿ ಕಾರ್ಯನಿರತರಾಗಲು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನನ್ನು ನಂಬುವವರಿಗೆ ಉಪದೇಶವನ್ನೂ ಮಾರ್ಗದರ್ಶನವನ್ನೂ ನೀಡಿದ್ದರು.

ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜಮಾಅತಿಗೆ ಸೇರಿದ ಕಾರಣ ನಮ್ಮ ಮೇಲಿರುವ ಹೊಣೆಗಾರಿಕೆಗಳನ್ನು ನಾವು ಈಡೇರಿಸುವ ಭಾಗ್ಯ ಅಲ್ಲಾಹನು ನಮಗೆ ದಯಪಾಲಿಸಲಿ. ನಾವು ಪವಿತ್ರ ಖುರ್ಆನ್ ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಡೆವಳಿಕೆ ಪ್ರಕಾರ ಕಾರ್ಯನಿರತರಾಗುವ ಭಾಗ್ಯ ಅಲ್ಲಾಹನು ನಮಗೆ ನೀಡಲಿ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮಹತ್ತರವಾದ ಸ್ಥಾನದ ಬಗ್ಗೆ ಸರಿಯಾದ ಜ್ಞಾನ ನಮಗೆ ಲಭಿಸುವಂತಾಗಲಿ. ಇಸ್ಲಾಮಿನ ನೈಜ ಚಿತ್ರವನ್ನು ಲೋಕದ ಮುಂದೆ ತೋರಿಸುವ ಭಾಗ್ಯ ಅಲ್ಲಾಹನು ನಮಗೆ ದಯಪಾಲಿಸಲಿ – ಆಮೀನ್.

——————————*****——————————

***Friday Sermon delivered by Hadrath Khaleefatul Masih Al Khamis***$^{(atba)}$

*at Masjid Baithul Futhuh, London on 29-04-2016.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon